ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 04-11-2001

# *ಸತ್ಯವಾದಿಯಾಗಿರಿ ಮತ್ತು ಸಮಯವನ್ನನುಸರಿಸಿ ಬೇಹದ್ ವೃತ್ತಿ, ದೃಷ್ಟಿ ಮತ್ತು ಕೃತಿಯನ್ನು ತಯಾರು ಮಾಡಿಕೊಳ್ಳುವ ದೃಢ ಸಂಕಲ್ಪವೆಂಬ ದೀಪವನ್ನು ಬೆಳಗಿಸಿರಿ.*

(सत्यवादी बनो और समय प्रमाण रहमदिल बन बेहद की वृत्ति, दृष्टि और कृति बनाने के दृढ़ संकल्प का दीप जलाओ)

ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ  ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಪ್ರೇಮಸಾಗರನಾದ ಬಾಪ್‌ದಾದಾ ತನ್ನ ಅತಿಪ್ರಿಯವಾದ ಮಧುರಾತಿ ಮಧುರವಾದ ಮಕ್ಕಳನ್ನು ಭೇಟಿಯಾಗಲು ಬಂದಿದ್ದಾರೆ.  ನೀವೆಲ್ಲರೂ ಸಹ ಮಿಲನವನ್ನು ಆಚರಿಸಲು ಬಂದಿದ್ದೀರಲ್ಲವೇ? ಓಡೋಡಿ ಬಂದಿದ್ದೀರಿ ಆದ್ದರಿಂದ ಬಾಪ್‌ದಾದಾ ಸಹ ಮಕ್ಕಳನ್ನು ಭೇಟಿ ಮಾಡಲು ಓಡೋಡಿ ಬಂದಿದ್ದಾರೆ ನೀವೆಲ್ಲರೂ ಈ ಲೋಕದಿಂದ ಬಂದಿದ್ದೀರಿ ಮತ್ತು ಬಾಪ್‌ದಾದಾ ಪರಲೋಕದಿಂದ, ಸೂಕ್ಷ್ಮ ಲೋಕದಿಂದ ಬಂದಿದ್ದಾರೆ ಆದರೆ ಎಲ್ಲರಿಗಿಂತಲೂ ದೂರದಿಂದ ಯಾರು ಬಂದಿದ್ದಾರೆ. ಬಾಪ್‌ದಾದಾರವರಿಗೆ ಈ ಬಾರಿ ಡಬಲ್ ವಿದೇಶಿ ಮತ್ತು ಭಾರತವಾಸಿ ಮಕ್ಕಳ ಒಂದು ವಿಷಯದಲ್ಲಿ ಹೆಮ್ಮೆ ಇದೆ. ಯಾವ ವಿಷಯದ ಬಗ್ಗೆ ಹೆಮ್ಮೆ ಇದೆ? ಹೇಳಿರಿ. ಮಕ್ಕಳ, ವಿಶೇಷವಾಗಿ ದೂರದೇಶಿ ಮಕ್ಕಳ ಧೈರ್ಯವನ್ನು ನೋಡಿ ಬಾಪ್‌ದಾದಾರವರಿಗೆ ಹೆಮ್ಮೆ ಎನಿಸುತ್ತಿದೆ ಎಂತಹ ಪರಿಸ್ಥಿತಿಗಳಲ್ಲಾದರೂ, ಡ್ರಾಮಾ ತನ್ನ

ಆಟವನ್ನು ಸಹ ತೋರಿಸಿದೆ ಆದರೂ ತಂದೆ ಮತ್ತು ಮಕ್ಕಳ ಮಿಲನವನ್ನು ಡ್ರಾಮಾ ಸಹ ನಿಲ್ಲಿಸಲಾಗಲಿಲ್ಲ. ಅಂತಹ ಧೈರ್ಯವಂತರಾದ ಮಕ್ಕಳ ಮೇಲೆ ಬಾಪ್‌ದಾದಾರವರು ಸಹ ವರದಾನಗಳ ಹೂಮಳೆಯನ್ನು ಸುರಿಸುತ್ತಿದ್ದಾರೆ.

ಇಂದು ಈ ಘಳಿಗೆಯಲ್ಲಿ ಯಾವ ಮಗುವಿಗೆ ಯಾವ ವರದಾನವು ಬೇಕೆಂದರೆ ಆ ವರದಾನವು ಲಭಿಸುತ್ತದೆ. ವರದಾನವು ಸಹಜವಾಗಿ ಲಭಿಸುತ್ತದೆ ಆದರೆ ಆ ವರದಾನವನ್ನು ಪ್ರತಿಯೊಂದು ದಿನ ಅಮೃತ ವೇಳೆ ಮತ್ತು ಕರ್ಮಯೋಗಿ ಸ್ಥಿತಿಯಲ್ಲಿ ಮಾತು ಮಾತಿಗೆ ಮನಸ್ಸಿನಿಂದ ಸ್ಮೃತಿ ಮಾಡಿರಿ. ಬಲಹೀನವಾಗಬೇಡಿರಿ ವರದಾನವು ಲಭಿಸಿದೆ ಆದರೆ ಆ ವರದಾನ ಸದಾ ನಯನಗಳಲ್ಲಿ ಇರಬೇಕು. ಹೇಗಾದರೆ ಸ್ಥೂಲ ನಯನಗಳ ಮಧ್ಯೆ ಏನು ಹೊಳೆಯುತ್ತದೆ? ಎಲ್ಲರ ನಯನಗಳ ಮಧ್ಯೆ ಏನು ಹೊಳೆಯುತ್ತಾ ಕಾಣಿಸುತ್ತದೆ? ಬಿಂದು ಹೊಳೆಯುತ್ತದೆಯಲ್ಲವೇ? ನಿರಂತರ ನಯನಗಳ ಮಧ್ಯೆ ಬಿಂದುವು ಹೊಳೆಯುತ್ತಾ ಕಾಣಿಸುತ್ತದೆಯಲ್ಲವೇ ಅಥವಾ ಆಗಾಗ ಮಾತ್ರ ಹೊಳೆಯುತ್ತದೆಯೇ? ನಿರಂತರ ಹೊಳೆಯುತ್ತದೆಯಲ್ಲವೇ, ಅದೇ ರೀತಿಯಾಗಿ ಸದಾ ನಯನಗಳಲ್ಲಿ ತಂದೆಯ ಬಿಂದುವು ಸಮಾವೇಶವಾಗಿರಬೇಕು. ಆಗುತ್ತಿದೆಯೇ? ಕಷ್ಟವಾಗುತ್ತಿದೆಯೇ? ಕಷ್ಟವಲ್ಲ ತಾನೇ? ಸಹಜವೇನಾ? ಒಳ್ಳೆಯದು. ಯಾವ ರೀತಿಯಾದರೆ ಸ್ಥೂಲವಾದ ಬಿಂದುವು ನಿರಂತರ ಹೊಳೆಯುತ್ತಾ ಇರುತ್ತದೆಯೋ ಅದೇ ರೀತಿ ನಯನಗಳಲ್ಲಿ ನಿರಂತರ ತಂದೆಯ ಬಿಂದು ಸಮಾವೇಶವಾಗಿರಬೇಕು. ಸಮಾವೇಶಗೊಳಿಸಿಕೊಂಡಿದ್ದೀರಾ? ಬಿಗಿಯಾಗಿದೆಯೇ? ತೊಲಗುತ್ತಿಲ್ಲ ತಾನೇ? ಒಂದು ವೇಳೆ ನಯನಗಳಲ್ಲಿ ನಿರಂತರ ತಂದೆಯ ಬಿಂದು ಸಮಾವೇಶವಾಗಿದ್ದರೆ ಬೇರೆ ಯಾವ ಕಡೆಯೂ ನಿಮ್ಮ ದೃಷ್ಟಿ ಹೋಗುವುದಿಲ್ಲ. ಪೂರ್ತಿಯಾಗಿ ರಕ್ಷಣೆಯಿಂದ ಇರುತ್ತೀರಿ. ಏನಾದರೂ ಆಗಲಿ ನಯನಗಳಲ್ಲಿ ಸದಾ ತಂದೆಯ ಬಿಂದುವೇ ಸಮಾವೇಶವಾಗಿರಬೇಕು. ಸದಾ ನಯನಗಳಲ್ಲಿ ತುಂಬಿಕೊಂಡಿದ್ದರೆ ಮನಸ್ಸಿನಲ್ಲಿ ಸಹ ಅವರೇ ಇರುತ್ತಾರೆ ಆದ್ದರಿಂದ ಮನಸ್ಸಿನಲ್ಲಿ ಮತ್ತು ನಯನಗಳಲ್ಲಿ ಸಮಾವೇಶಗೊಳಿಸಿಕೊಳ್ಳುವ ವಿಧಿಯಿಂದ ಬಾಪ್‌ದಾದಾರವರನ್ನು ಅರ್ಥಾತ್ ಮಾಲೀಕನನ್ನು ರಾಜಿ ಮಾಡಿಕೊಳ್ಳಬೇಕು. ರಾಜಿಯಾಗಿದ್ದಾರೆಯೇ? ಬಾಪ್‌ದಾದಾ, ಯಜಮಾನಿ ನಿಮ್ಮ ಮೇಲೆ ರಾಜಿ ಆದಂತೆ ನೀವು ಭಾವಿಸುತ್ತಿದ್ದೀರಾ? ಎಷ್ಟು ಪ್ರತಿಶತ ರಾಜಿಯಾಗಿದ್ದಾರೆ? (ಸ್ವಲ್ಪ ಜನ 75 ಎಂದು ಇನ್ನು ಕೆಲವರು 99 ಎಂದು ಹೇಳಿದರು) ಬಾಪ್‌ದಾದಾರವರನ್ನು ರಾಜಿ ಮಾಡಿಕೊಳ್ಳುವುದು ಬಹಳ ಸಹಜ. ಸಹಜವೇ ಅಥವಾ ಕಷ್ಟವೇ? ಸಹಜವೇ, ಹಿಂದಿನವರು ಹೇಳಿರಿ ಸಹಜವೇನಾ? ಕೈ ಅಂತು ಬಹಳ ಚೆನ್ನಾಗಿ ಎತ್ತಿದ್ದೀರಿ.

ಬಾಪ್‌ದಾದಾರವರನ್ನು ರಾಜಿ ಮಾಡಿಕೊಳ್ಳುವ ಸಹಜವಾದ ವಿಧಿ ಸತ್ಯವಾದ ಮನಸ್ಸು. ಸತ್ಯವಾದ ಮನಸ್ಸಿಗೆ ಪ್ರಭು ರಾಜಿಯಾಗುತ್ತಾರೆ ಪ್ರತಿಯೊಂದು ಕರ್ಮದಲ್ಲಿ ಸತ್ಯವಾದಿಯಾಗಿರಬೇಕು. ಯಾರಾದರೆ ಸತ್ಯವಾದ ಮನಸ್ಸಿನಿಂದ ಇರುತ್ತಾರೆಯೋ ಅವರು ಸದಾ ಸಂಕಲ್ಪದಲ್ಲಿ, ಮಾತು ಮತ್ತು ಕರ್ಮದಲ್ಲಿ, ಸಂಬಂಧ ಸಂಪರ್ಕದಲ್ಲಿ ರಾಜಯುಕ್ತವಾಗಿ ಇರುತ್ತಾರೆ. ಅರ್ಥಾತ್ ರಹಸ್ಯವನ್ನು ಅರ್ಥ ಮಾಡಿಕೊಳ್ಳುವವರು ಮತ್ತು ನಡೆಯುವವರು. ರಾಜಯುಕ್ತವಾದವರ ಗುರುತು ರಹಸ್ಯವನ್ನು ತಿಳಿದುಕೊಳ್ಳುವರು. ಯಾವಾಗಲೂ ತಮ್ಮ ಸ್ವಸ್ಥಿತಿಯಲ್ಲಿ ಕ್ರೋಧದಲ್ಲಿ ಬರುವುದಿಲ್ಲ ಅರ್ಥಾತ್ ಚಿಂತಿಸುವುದಿಲ್ಲ. ಈ ಗುರುತಿನಿಂದ ಎಲ್ಲಿಯವರೆಗೆ ರಾಜಯುಕ್ತವಾಗಿದ್ದೇವೆ ಎಂಬುದನ್ನು ಪರಿಶೀಲಿಸಿಕೊಳ್ಳಬಹುದು. **ರಾಜಯುಕ್ತವಾಗಿರುವವರು ಸಂಕಲ್ಪದಲ್ಲಿಯೂ, ವೃತ್ತಿಯಲ್ಲಿಯೂ, ಸ್ಮೃತಿಯಿಂದಲೂ ಸಹ, ದೃಷ್ಟಿಯಿಂದಲೂ ಸಹ ಯಾರ ಮೇಲೆಯೂ ಕ್ರೋಧದಲ್ಲಿ ಬರುವುದಿಲ್ಲ. ಏಕೆ? ಎಲ್ಲರ ಮತ್ತು ತಮ್ಮ ಸ್ವಭಾವ**

**ಸಂಸ್ಕಾರಗಳನ್ನು ತಿಳಿದುಕೊಳ್ಳುವ ರಾಜಯುಕ್ತ್ ಆಗಿರುತ್ತಾರೆ ಆದ್ದರಿಂದ ತಂದೆಯನ್ನು ಸಹ ರಾಜಿ ಮಾಡಿಕೊಳ್ಳುವ ವಿಧಿ ರಾಜಯುಕ್ತವಾಗಿ ನಡೆಯುವುದು ಮತ್ತು ರಾಜಯುಕ್ತ್ ಅರ್ಥಾತ್ ಸ್ವಯಂನ ಪ್ರತಿ ಮತ್ತು ಇತರರ ಪ್ರತಿಯೂ ಕ್ರೋಧಕ್ಕೊಳಗಾಗಬಾರದು. ಸದಾ ಸಮಯವನ್ನನುಸರಿಸಿ ನಿಮ್ಮ ಮನಸ್ಸು, ಬುದ್ಧಿ, ಸ್ವಪ್ನವನ್ನೂ ಸಹ ಸದಾ ಶುಭವಾಗಿ ಮತ್ತು ಶುದ್ಧವಾಗಿಟ್ಟುಕೊಳ್ಳಿರಿ.** ಬಾಪ್‌ದಾದಾರವರಂತೂ ಶಕ್ತಿಯನ್ನು ಕೊಡುತ್ತಿದ್ದಾರೆ ಆದರೆ ಸಮಯಕ್ಕೆ ಆ ಶಕ್ತಿಗಳನ್ನು ಉಪಯೋಗಿಸಲಾಗುತ್ತಿಲ್ಲ ಎಂದು ಕೆಲವು ಮಕ್ಕಳು ಆತ್ಮಿಕ ಸಂಭಾಷಣೆಯಲ್ಲಿ ಹೇಳುತ್ತಿದ್ದಾರೆ. ಬಾಪ್‌ದಾದಾ ವಿಶೇಷವಾಗಿ ಮಕ್ಕಳೆಲ್ಲರ ಸಂಗಾತಿ. ಆದ್ದರಿಂದ ಆ ಸಂಬಂಧದೊಂದಿಗೆ ವಿಶೇಷವಾಗಿ ಅಂತಹ ಸಮಯದಲ್ಲಿ ಎಕ್ಸ್ಟ್ರಾ ಸಹಾಯವನ್ನು ಮಾಡುತ್ತಾರೆ. ಏಕೆ? ಏಕೆಂದರೆ ಮಕ್ಕಳನ್ನು ಸಂಪನ್ನ ಮಾಡಿ ಜೊತೆಗೆ ಕರೆದೊಯ್ಯುವುದು ತಂದೆಯ ಜವಾಬ್ದಾರಿಯಾಗಿದೆ. ಜವಾಬ್ದಾರಿ ತಂದೆಯದು. ಆದ್ದರಿಂದ ಅಂತಹ ಸಮಯದಲ್ಲಿ ತನ್ನ ಜವಾಬ್ದಾರಿಯನ್ನು ನಿಭಾಯಿಸುತ್ತಾರೆ. ಆದರೆ ಆಗಾಗ ಮಕ್ಕಳಲ್ಲಿ ಮನಸ್ಸಿನ ಕ್ಯಾಚಿಂಗ್ ಪವರ್ (ಗ್ರಹಣ ಶಕ್ತಿಯ) ಸ್ವಿಚ್ ಆಫ್ ಆಗಿರುತ್ತದೆ. ಆಗ ತಂದೆ ಏನು ಮಾಡುತ್ತಾರೆ? ತಂದೆ ಸ್ವಿಚ್ ಆನ್ ಮಾಡಲು, ತೆಗೆಯಲು ಪ್ರಯತ್ನ ಮಾಡುತ್ತಾರೆ. ಆದರೆ ಇದರಲ್ಲಿ ಸಮಯವಿಡಿಸುತ್ತದೆ ಆದ್ದರಿಂದಲೇ ಮಾಡಬೇಕೆಂದುಕೊಳ್ಳುತ್ತಿಲ್ಲ ಆದರೆ ಆಗಿಬಿಡುತ್ತಿದೆ ಎಂದು ಸ್ವಿಚ್ ಆನ್ ಆದ ನಂತರ ಹೇಳುತ್ತಿದ್ದಾರೆ. ಅದರಿಂದ ಸದಾ ನಿಮ್ಮ ಮನಸ್ಸಿನ ಕ್ಯಾಚಿಂಗ್ ಪವರ್ ಇದನ್ನೇ ನೀವು ಟಚಿಂಗ್, ಪ್ರೇರಣೆ ಮತ್ತು ಕ್ಯಾಚಿಂಗ್ ಪವರ್ ಎಂದು ಹೇಳುತ್ತೀರಿ. ಅವುಗಳ ಸ್ವಿಚ್ ಆನ್ ಮಾಡಿ ಇಡಿ. ಮಾಯೆ ಆಫ್ ಮಾಡುವ ಪ್ರಯತ್ನ ಮಾಡುತ್ತದೆ. ಕ್ಷಣದಲ್ಲಿ ಆಫ್ ಮಾಡಿ ಹೋಗಿಬಿಡುತ್ತದೆ. ಈಗ ಸಮಯ ಬಹಳ ನಾಜುಕು ಆಗುತ್ತಾ ಇರುತ್ತದೆ. ಇನ್ನೂ ಆಗುತ್ತದೆ. ಭಯಪಡುತ್ತಿಲ್ಲ ತಾನೇ? ಏನು ಪರವಾಗಿಲ್ಲ, ಬಾಪ್‌ದಾದಾ ಮೊದಲೇ ತಿಳಿಸಿದ್ದಾರಲ್ಲವೇ, ಈ ವರ್ಷವನ್ನು ಯಾವ ವರ್ಷವನ್ನಾಗಿ ಆಚರಿಸಿಕೊಳ್ಳುತ್ತಿದ್ದೀರಿ? ಸಂಸ್ಕಾರಗಳ ಪರಿವರ್ತನೆಯಿಂದ ವಿಶ್ವದ ಪರಿವರ್ತನೆ. ಪಕ್ಕಾ ಆಗಿದೆ ಅಲ್ಲವೇ? ಆಚರಿಸಿಕೊಳ್ಳುತ್ತಿದ್ದೀರಲ್ಲವೇ ಅಥವಾ ಮರೆತುಬಿಟ್ಟಿದ್ದೀರಾ ಅಥವಾ ಆಚರಿಸಿಕೊಳ್ಳುತ್ತಿದ್ದೀರಾ? ಪ್ರಕೃತಿ ತಂದೆಯನ್ನು ಕೇಳುತ್ತಿದೆ, ಮಕ್ಕಳು ವಿಶ್ವದ ಪರಿವರ್ತನೆಯ ಸಂಕಲ್ಪವನ್ನು ತೆಗೆದುಕೊಂಡಿದ್ದಾರೆ ಆದರೆ ಪಕ್ಕಾವಾಗಿ ತೆಗೆದುಕೊಂಡಿದ್ದೀರಲ್ಲವೇ? ಹಿಂದೆ ಇರುವವರು ತೆಗೆದುಕೊಂಡಿದ್ದೀರಾ? ಸಂಕಲ್ಪ ಪಕ್ಕಾ ಆಗಿದೆ ಅಲ್ಲವೇ? ಎಲ್ಲರ ಸಂಕಲ್ಪವೇ ತಾನೆ? ನಾನು ಸ್ವಚ್ಛ ಮಾಡಲು ತಯಾರಾಗುತ್ತಿದ್ದೇನೆ ಎಂದು ಪ್ರಕೃತಿ ತಂದೆಯನ್ನು ಕೇಳುತ್ತಿದೆ. ಸ್ವಚ್ಛ ಮಾಡಲು ನಿಮಿತ್ತವಾದವರು ಮಾಡುವುದೇ, ಬೇಡವೇ, ಬೇಗವಾಗಿ ಮಾಡುವುದೇ ಅಥವಾ ನಿಧಾನವಾಗಿ ಮಾಡುವುದೇ ಎಂದು ಯೋಚಿಸುತ್ತಿದ್ದಾರೆ. ಸಂಶಯದಲ್ಲಿದ್ದಾರೆ. ಮತ್ತೆ ನಾನೇನು ಮಾಡುವುದು ಎಂದು ಪ್ರಕೃತಿಯು ಕೇಳುತ್ತಿದೆ. ಉತ್ತರವೇನು? ಪ್ರಕೃತಿಗೆ ಏನು ಉತ್ತರವನ್ನು ತಿಳಿಸಬೇಕು, ಹೇಳಿರಿ, ಡಬಲ್ ವಿದೇಶಿಯರು ಹೇಳಿರಿ. (ಸ್ವಲ್ಪ ನಿಲ್ಲಲು ಹೇಳಿರಿ) ಇದು ಸರಿಯಾದ ಉತ್ತರವಲ್ಲ. ಒಂದು ವೇಳೆ ಡಬಲ್ ವಿದೇಶಿಯರು ಹಾದಿ ನೋಡುತ್ತಾ ನಿಂತುಬಿಟ್ಟರೆ ವಿಮಾನವು ಸಿಗುವುದಿಲ್ಲ. ಈಗಂತೂ ವಿಮಾನವು ಸಿಕ್ಕಿದೆ. ವಿಮಾನದಲ್ಲಿ ನಿದ್ದೆ ಮಾಡುತ್ತಾ ಬಂದಿದ್ದೀರಿ. ವಿಶ್ರಾಂತಿಯಿಂದ ಬಂದಿದ್ದೀರಿ. ಇಡೀ ಸಭೆಯಲ್ಲಿ ಯಾರಿಗಾದರೂ ಬರಲು ಕಷ್ಟವೆನಿಸಿತೇ? ಕೈಯನ್ನೆತ್ತಿರಿ. ಯಾರಿಗಾದರೂ ಅನಿಸಿದೆಯೇ? ತಲುಪಿದಿರಲ್ಲವೇ? ಸಮಯಕ್ಕೆ ತಲುಪಿದ್ದೀರಿ. ಇದು ಧೈರ್ಯದ ವಿಷಯವಾಗಿದೆ. ಸ್ವಲ್ಪ ಭಯ ಪಟ್ಟವರು ಉಳಿದುಕೊಂಡು ಬಿಟ್ಟಿದ್ದಾರೆ. ಹಾಗಾದರೆ ಹೋಗಲೇಬೇಕು ಎಂಬ ದೃಢಸಂಕಲ್ಪ ಮಾಡಿದ್ದೀರಿ ತಲುಪಿದ್ದೀರಿ. ಕೇವಲ ಒಂದು ವಿಮಾನವೇ ಹಿಂತಿರುಗಿ ಬಂದಿದೆ. ಅಷ್ಟೇ ತಾನೇ! ಅದೇನು ದೊಡ್ಡ ವಿಷಯವಲ್ಲ. ನಂತರ ಚೆನ್ನಾಗಿ ಲಭಿಸುತ್ತದೆ. ಆಗಾಗ ಪ್ರಕೃತಿಯನ್ನು ಸ್ವಚ್ಛ ಮಾಡುವ ವಿಷಯದ ಆಲೋಚನೆಯಲ್ಲಿ ಬೀಳಬೇಡಿರಿ. ಏಕೆಂದರೆ ಸ್ಥಾಪನೆ ಮಾಡುವವರು ಆಗಾಗ ಏನು

ಮಾಡುವುದು, ಹೀಗೆ ಮಾಡುವುದೇ, ಬೇಡವೇ, ಸರಿಯಾಗುತ್ತದೆಯೇ, ಆಗುವುದಿಲ್ಲವೇ, ಹೀಗೆ ಯೋಚಿಸುತ್ತಿದ್ದೀರಿ, ಹೌದೋ ಇಲ್ಲವೋ ಎಂಬುವುದು ಒಂದೇ ಬಾರಿ ಸ್ಪಷ್ಟವಾಗಬೇಕು. ಇದು ಸತ್ಯ ಇದು ಅಸತ್ಯ ಎಂದು ಸ್ಪಷ್ಟವಾಗಬೇಕು. ನೀವು ಈ ವರ್ಷ ಆಚರಿಸಿಕೊಂಡ ಕಾರಣ ಪ್ರಕೃತಿಯೂ ತಯಾರಿಯನ್ನು ಮಾಡುತ್ತಿದೆ. ಈಗಲೂ ಸಹ ಮಾಡುತ್ತಿದೆ. ಆದರೆ ಸ್ಥಾಪನೆಗೆ ನಿಮಿತ್ತವಾದ ಆತ್ಮರು ಈಗ ಯಾವುದೋ ಒಂದು ವಿಷಯದಲ್ಲಿ ಸ್ವಯಂನ ಪ್ರತಿಯಾದರೂ, ಇತರರ ಪ್ರತಿಯಾದರು ಯೋಚನೆಯಲ್ಲಿ ಸಮಯವನ್ನು ಕಳೆಯಬಾರದು. ಕ್ಷಣದಲ್ಲಿ ಸ್ಪಷ್ಟವಾದ ಪ್ರೇರಣೆಯು ಬರಬೇಕು.

ಬಿಂದುವನ್ನಿಡುವುದರಲ್ಲಿ ಎಷ್ಟು ಸಮಯ ಹಿಡಿಸುತ್ತದೆ. (ಕ್ಷಣ ಹಿಡಿಸುತ್ತದೆ) ಪ್ರತ್ಯಕ್ಷ ಜೀವನದಲ್ಲಿ ಬಿಂದುವನ್ನಿಡುವುದರಲ್ಲಿ ಕ್ಷಣ ಹಿಡಿಸುತ್ತದೆಯೇ? ಯಾವ ವಿಷಯದಲ್ಲಾದರೂ ಬಿಂದು ಇಡುವುದರಲ್ಲಿ ಅಥವಾ ಬಿಂದು ರೂಪಸ್ಥಿತಿಯಲ್ಲಿ ಸ್ಥಿತರಾಗುವುದರಲ್ಲಿ ಕ್ಷಣವೇ ಹಿಡಿಸುತ್ತಿದೆಯೇ ಅಥವಾ ಪ್ರತ್ಯಕ್ಷದಲ್ಲಿ ಕ್ಷಣಕ್ಕಿಂತಲೂ ಜಾಸ್ತಿ ಹಿಡಿಸುತ್ತಿದೆಯೇ? ಯಾವುದಾದರೂ ಒಂದು ವಿಷಯ ನಿಮ್ಮ ಎದುರಿಗೆ ಬಂದಾಗ ಬಿಂದು ಇಡುವುದರಲ್ಲಿ ಕ್ಷಣ ಹಿಡಿಸುತ್ತಿದೆಯೇ? ಪಾಂಡವರಿಗೆ ಕ್ಷಣವಿಡಿಸುತ್ತದೆಯೇ? (ಆಗಾಗ ಸಮಯ ಹಿಡಿಸುತ್ತಿದೆ ಎಂದು ಹೇಳಿದರು) ಪಾಂಡವರಂತು ಬಿಂದು ಇಡುವುದರಲ್ಲಿ ಸಮಯ ಹಿಡಿಸುತ್ತಿದೆ ಎಂದು ಹೇಳಿದರು. ಶಕ್ತಿಯರಲ್ಲಿ ಶಕ್ತಿ ಇದೆಯೇ? (ಪಾಂಡವರು ಸತ್ಯ ಹೇಳಿದ್ದಾರೆ ಎಂದು ಹೇಳಿದರು) ಅಲ್ಲ ಪಾಂಡವರು, ಶಕ್ತಿಯರು ಇಬ್ಬರೂ ಸತ್ಯವಾದವರೇ ಏಕೆಂದರೆ ಅವರು (ಪಾಂಡವರು) ಈಗ ಬಿಂದುವನ್ನು ಇಡಬಲ್ಲರು ಆದರೆ ನೀವು ಆಗ ಇಡಲಾಗುವುದಿಲ್ಲವೇನೋ ಆದ್ದರಿಂದಲೇ ವ್ಯತ್ಯಾಸ ಬಂದಿದೆ. ಆದರೆ ಎಲ್ಲರೂ ಸತ್ಯವಾದವರೇ ಎಲ್ಲರೂ ಸತ್ಯವಾದ ಹೃದಯ ಉಳ್ಳವರೇ ಹಾಲ್ ಅಂತೂ ತುಂಬಿಹೋಗಿದೆ. ಕೆಳಗಡೆ ಸಹ ಕುಳಿತುಕೊಂಡಿದ್ದಾರೆ. ಕೆಳಗಡೆ ಕುಳಿತಿದ್ದರೂ ಸಮ್ಮುಖದಲ್ಲಿಯೇ ಇದ್ದಾರೆ. ಮದುಬನದಲ್ಲಿ ಬಾಪ್‌ದಾದಾ ಬಂದಿದ್ದಾರೆ ಎಂದು ದೇಶ ವಿದೇಶಗಳಲ್ಲಿರುವ ಮಕ್ಕಳೆಲ್ಲರೂ ಇದೇ ಸ್ಮೃತಿಯಲ್ಲಿದ್ದಾರೆ. ತಮ್ಮ ತಮ್ಮ ದೂರದೇಶಿ ದೃಷ್ಟಿ ಎಂಬ ದುರ್ಬಿನ್ ನಲ್ಲಿ ನೋಡುತ್ತಿದ್ದಾರೆ. ಅವರು ಸಹ ಬಾಪ್‌ದಾದಾರವರ ಎದುರಿಗೆ ಬರುತ್ತಿದ್ದಾರೆ ಅರ್ಥಾತ್ ಅಂತಹವರು ದೂರದಲ್ಲಿದ್ದರೂ ಸಹ ಮನಸ್ಸಿನಿಂದ ಮದುಬನದಲ್ಲಿಯೇ ಇದ್ದಾರೆ. ಸಾಕಾರ ಲೋಕದ ಸ್ಥೂಲ ಸಾಧನಗಳಂತೂ ಏರುಪೇರು ಆಗಬಹುದು ಆದರೆ ಈ ಆಧ್ಯಾತ್ಮಿಕ ದೂರ ದೃಷ್ಟಿ, ದೂರದೇಶಿದೃಷ್ಟಿ ಯಾವಾಗಲು ಹಾಳಾಗುವುದಿಲ್ಲ. ಈ ವಿಧವಾಗಿ ನಾಲ್ಕು ಕಡೆ ಇರುವ ಸೇವಾಕೇಂದ್ರದಲ್ಲಿರುವ ಮಕ್ಕಳೆಲ್ಲರೂ ಬಾಪ್‌ದಾದಾರವರ ಎದುರಿಗೆ ಕಾಣಿಸುತ್ತಿದ್ದಾರೆ, ಒಳ್ಳೆಯದು. ದೀಪಾವಳಿಯನ್ನು ಆಚರಿಸಿಕೊಳ್ಳುತ್ತಿದ್ದೀರಾ? ಸಂಗಮಯುಗ ಅರ್ಥಾತ್ ಆಚರಿಸಿಕೊಳ್ಳುವ ಯುಗ. ಅಂತರ್ಮುಖಿಯಾಗಿ, ಅತೀಂದ್ರಿಯ ಸುಖದ ಮೋಜನ್ನು ಪಡೆದುಕೊಳ್ಳಿ. ಸೇವೆಯಲ್ಲಿ ಮಹಾದಾನಿಯಾಗಿ ಆತ್ಮರಿಗಾಗಿ ಮಹಾದಾನ ಮಾಡುತ್ತಾ ಹೋಗಿರಿ. ಪರಸ್ಪರ ಆತ್ಮಿಕ ಸಂಭಾಷಣೆಯನ್ನು ಮಾಡಿಕೊಳ್ಳಿರಿ. ನೃತ್ಯ ಮಾಡಿರಿ ಅಥವಾ ಸಂಬಂಧ ಸಂಪರ್ಕಗಳಲ್ಲಿ ಪರಸ್ಪರ ವಿಶೇಷತೆಗಳನ್ನು ನೋಡಿ ವಿಶೇಷತೆಗಳ ಸುವಾಸನೆಯನ್ನು ಸ್ವೀಕರಿಸಿರಿ. ಹೀಗೆ ಆಚರಿಸಿಕೊಳ್ಳುವುದೇ ಆಚರಿಸಿಕೊಳ್ಳುವುದು. ಕಳೆದುಕೊಳ್ಳುವ ಸಮಯವು ಸಮಾಪ್ತಿ ಆಗಿಬಿಟ್ಟಿದೆ, ಇದು ಕಳೆಯುವ ಸಮಯವಲ್ಲ. ಆಚರಿಸಿಕೊಳ್ಳುವ ಮತ್ತು ಸಂಪಾದಿಸಿಕೊಳ್ಳುವ ಯುಗ. ಹೀಗೆ ಪ್ರತಿಯೊಂದು ಮಗು ಸದಾ ಆಚರಿಸಿಕೊಳ್ಳುತ್ತಾ ಇರಬೇಕು ಎಂದು ಬಾಪ್‌ದಾದಾರವರು ನೋಡುತ್ತಾ ಇರುತ್ತಾರೆ. ಯಾವುದೋ ಒಂದು ರೀತಿಯಲ್ಲಿ ಆಚರಿಸಿಕೊಳ್ಳುತ್ತಲೇ ಇರಬೇಕು ಕಳೆದುಕೊಳ್ಳುವುದು ಮತ್ತು ಆಚರಿಸಿಕೊಳ್ಳುವುದು ಎರಡರ ಜ್ಞಾನ ಈ ಸಂಗಮ ಯುಗದಲ್ಲಿಯೇ ಇರುತ್ತದೆ. ಕಳೆದುಕೊಳ್ಳುವವರು ಹಿಂತಿರುಗಿ ಆಚರಿಸಿಕೊಳ್ಳುತ್ತಿದ್ದಾರೆ.

ಇದಕ್ಕೆ ಶ್ರೇಷ್ಠತೆ ಇದೆ. ಈಗ ಕಳೆದುಕೊಳ್ಳುವುದಕ್ಕೆ ಬಿಂದುವನ್ನಿಡಬೇಕು, ನಿಲ್ಲಿಸಿಬಿಡಿ. ಕಳೆದುಕೊಳ್ಳಬಾರದು ಒಂದು ಸಂಕಲ್ಪವನ್ನೂ ಸಹ ಕಳೆದುಕೊಳ್ಳಬಾರದು. ಸಂಪಾದಿಸಿಕೊಳ್ಳುವ ಸಮಯದಲ್ಲಿ ಕಳೆದುಕೊಂಡರೆ ಇನ್ನೂ ಯಾವಾಗ ಸಂಪಾದಿಸಿಕೊಳ್ಳುತ್ತೀರಿ ಮತ್ತೆ ಸಮಯ ಲಭಿಸುವುದಿಲ್ಲ ಎಲ್ಲದಕ್ಕಿಂತಲೂ ದೊಡ್ಡ ಖಜಾನೆ ಯಾವುದು? ಸಂಕಲ್ಪ, ಸಮಯವನ್ನು ಸಫಲ ಮಾಡಿಕೊಳ್ಳಬೇಕು. ಜ್ಞಾನದ ಖಜಾನೆ ಪ್ರತ್ಯಕ್ಷ ಜೀವನದಲ್ಲಿ ಬರಬೇಕು. ಜ್ಞಾನವನ್ನು ಕೇಳುವುದು ಮತ್ತು ಕೇಳಿಸುವುದು ಎಂಬುದು ಮೊದಲ ಸ್ಥಿತಿ. ಆದರೆ ಜ್ಞಾನವನ್ನು ಏನೆನ್ನುತ್ತಾರೆ? ಜ್ಞಾನವನ್ನು ಪ್ರಕಾಶ, ಶಕ್ತಿ ಎಂದು ಕರೆಯುತ್ತಾರೆ. ಎಂದರೆ ಜ್ಞಾನದ ಅರ್ಥ ಸಂಕಲ್ಪ, ಮಾತು ಮತ್ತು ಕರ್ಮದಲ್ಲಿ ಪ್ರಕಾಶ ಮತ್ತು ಶಕ್ತಿ ಇರಬೇಕು. ಆಗಲೇ ಜ್ಞಾನ ಸ್ವರೂಪ ಎಂದು ಕರೆಯುತ್ತಾರೆ.

ಕುಮಾರಿಯರು ಜ್ಞಾನಸ್ವರೂಪರಾಗುವವರೇ ತಾನೆ? ಕೇವಲ ಕೋರ್ಸ್ ಒಂದೇ ಹೇಳುವವರಾಗಿ ಇರಬಾರದು. ಉಪನ್ಯಾಸವೇ ಹೇಳುವವರಾಗಬಾರದು. ಜ್ಞಾನದ ಶಕ್ತಿ ಮತ್ತು ಪ್ರಕಾಶ ಸಂಕಲ್ಪ, ಮಾತು ಮತ್ತು ಕರ್ಮದಲ್ಲಿ ಜೊತೆಯೇ ಇರಬೇಕು. ಕುಮಾರಿಯರೆಂದರೆ ಬಾಪ್‌ದಾದಾರವರಿಗೆ ವಿಶೇಷವಾದ ಪ್ರೀತಿ ಇದೆ. ಏಕೆ? ತಮ್ಮ ಜೀವನದ ನಿರ್ಣಯವನ್ನು ತೆಗೆದುಕೊಂಡಿದ್ದೀರಿ. ತೆಗೆದುಕೊಂಡಿದ್ದೀರಲ್ಲವೇ ಅಥವಾ ಇನ್ನು ತೆಗೆದುಕೊಳ್ಳಬೇಕೇ? ಯೋಚಿಸುತ್ತಿದ್ದೀರಾ? ಪಕ್ಕಾ ಆಗಿ ಯೋಚಿಸಿಕೊಂಡಿದ್ದರೆ ಶುಭಾಶಯಗಳು. ಆಗ ನಿಮಗೆ ಇಷ್ಟು ಜನ ತಯಾರಾದ ಸಹಯೋಗಿಗಳು ಸಿಗುತ್ತಾರೆ. ಟ್ರೈನಿಂಗ್ ನಲ್ಲಿ ಇರುವವರು ಕೈಯನ್ನೆತ್ತಿರಿ. ಎಷ್ಟು ಜನ ಇದ್ದಾರೆ? (80 ಜನ ಇದ್ದಾರೆ) ಇಷ್ಟರವರೆಗೆ ಸೇವೆಯಲ್ಲಿ ಪಾಲ್ಗೊಳ್ಳದೇ ಇರುವವರು ಕೈಯನ್ನು ಎತ್ತಿರಿ. ಯಾರಾದರೆ ಸೇವಾಕೇಂದ್ರವನ್ನು ನಡೆಸುತ್ತಿಲ್ಲವೋ ಅವರು ಕೈಯನ್ನು ಎತ್ತಿರಿ. ಲೆಕ್ಕ ವಿಡಿ, ಅರ್ಧ ಜನ ಇದ್ದಾರೆ. ಅರ್ಥಾತ್ ಇಷ್ಟು ಜನ ಸಹಯೋಗಿಗಳಂತೂ ಲಭಿಸುತ್ತಾರಲ್ಲವೇ! ಬಲಭುಜಗಳೇ ಅಥವಾ ಎಡಭುಜಗಳೇ? ಬಲಬಜಗಳಾಗುತ್ತಿರಲ್ಲವೇ. ಒಳ್ಳೆಯದು. **ಕುಮಾರಿಯರಿಗೆ ಬಾಪ್‌ದಾದಾ ಮನೆಯನ್ನು ಸಹ ಕೊಡುತ್ತಾರೆ ಮತ್ತು ವರನಂತು ಲಭಿಸಿಯೇ ಇದ್ದಾರೆ. ಮನೆ ಮತ್ತು ವರನು ತಪ್ಪದೇ ಬೇಕಲ್ಲವೇ? ಕುಮಾರಿಯರಿಗೆ ವರನಂತೂ ಲಭಿಸಿಬಿಟ್ಟಿದ್ದಾರೆ. ಈಗ ಮನೆ ಸಹ ಲಭಿಸುತ್ತದೆ. ಸೇವಾ ಕೇಂದ್ರವೂ ಸಹ ಲಭಿಸುತ್ತದೆ. ಕುಮಾರರಿಗೂ ಸಹ ಲಭಿಸುತ್ತದೆ. ಕುಮಾರರು ನಾವು ಹಿಂದೆ ಏಕೆ ಇರಬೇಕು ಎಂದುಕೊಳ್ಳುತ್ತಿದ್ದಾರೆ. ಹಿಂದೆ ಇಲ್ಲ, ಮುಂದೆ ಇದ್ದೀರಿ. ಕುಮಾರರು ಇಲ್ಲದೇ ಸಹ ಸೇವೆ ಎಲ್ಲಿಯವರೆಗೆ ನಡೆಯುತ್ತದೆ? ಯಾವ ಸೇವಾಕೇಂದ್ರದಲ್ಲಾದರೂ ನೋಡಿರಿ ಹಾರ್ಡ್ ವರ್ಕ್ ಮಾಡುವ ಕುಮಾರರು ಇಲ್ಲದಿದ್ದರೆ ಅಕ್ಕಂದಿರು ಸಹ ಏನೂ ಮಾಡಲಾಗುವುದಿಲ್ಲ. ಇಬ್ಬರೂ ಅವಶ್ಯಕ. ಆದ್ದರಿಂದ ಪಾಂಡವರಿಗೂ ಸಹ ಹೆಸರಿದೆ ಮತ್ತು ಶಕ್ತಿಯರಿಗೂ ಸಹ ಹೆಸರಿದೆ.** ಇಬ್ಬರಿಗೂ ಹೆಸರಿದೆ, ಒಳ್ಳೆಯದು. ನಿಮ್ಮೆಲ್ಲರ ಮೀಟಿಂಗ್ಸ್ ನ ಸಮಾಚಾರ ಬಾಪ್‌ದಾದಾರವರ ಹತ್ತಿರ ತಲುಪಿದೆ. ಭಾರತವಾಸಿಯರ ಸಮಾಚಾರ ಮತ್ತು ವಿದೇಶಿಯರ ಸಮಾಚಾರವೂ ತಲುಪಿದೆ.

ಈ ವರ್ಷ ದೇಶ ವಿದೇಶಗಳಲ್ಲಿ ಕಾನ್ಫರೆನ್ಸ್ ಮತ್ತು ಸ್ನೇಹದ ಮಿಲನಗಳು ಬಹಳ ನಡೆದಿವೆ ಮತ್ತು ವಿದೇಶದಲ್ಲಿ ವಿಧವಿಧವಾದ ಪ್ರಾಜೆಕ್ಟಗಳು ಸಹ ನಡೆಯುತ್ತಿವೆ ಆದರೆ ಬಾಪ್‌ದಾದಾ ಏನು ನೋಡಿದರೆಂದರೆ ಸೇವೆಯ ಸಂಲಗ್ನತೆಯು ಇದೆ ಮತ್ತು ಸೇವೆಯ ವೇಗವೂ ತೀವ್ರವಾಗಿದೆ. ಎರಡೂ ಇವೆ ಸಮಯವನ್ನನುಸರಿಸಿ ಪ್ರತಿಯೊಂದು ಪ್ರಾಜೆಕ್ಟ್ ಅಥವಾ ಕಾನ್ಫರೆನ್ಸ್ ಅಥವಾ ಸ್ನೇಹದ ಮಿಲನ ಎನ್ನಿರಿ ಅಥವಾ ಯಾವುದೇ ಪ್ರೋಗ್ರಾಮ್ ನಡೆಯುತ್ತಿದ್ದರೂ

ಸಮಯಾನುಸಾರವಾಗಿ ಆ ರೂಪದಿಂದಲೇ ಟಾಪಿಕ್ ಇಡಬೇಕಾದ ಅವಶ್ಯಕತೆ ಇದೆ. ಏಕೆಂದರೆ ನೀರಿನ ಅವಶ್ಯಕತೆ ಇದ್ದವರಿಗೆ ಆ ಸಮಯದಲ್ಲಿ 36 ವಿಧವಾದ ಭೋಜನವನ್ನು ಇಟ್ಟರೆ ಅವರು ಸ್ವೀಕರಿಸುತ್ತಾರೆಯೇ? ಪ್ರಾಜೆಕ್ಟ್ ಏನಾದರೂ ಆಗಿರಲಿ, ಟಾಪಿಕ್ ಯಾವುದಾದರೂ ಆಗಿರಲಿ, ಆದರೆ ಆ ಸಮಯದಲ್ಲಿ ಎಲ್ಲರಿಗೂ ಬೇಕಾಗಿರುವುದು ಶಾಂತಿ ಮತ್ತು ಸ್ನೇಹ.  ಶಾಂತಿಯ ಬಾಯಾರಿಕೆಯಿಂದ, ಸ್ನೇಹದ ಬಾಯಾರಿಕೆಯಿಂದ ಇದ್ದಾರೆ ಒಳ್ಳೆಯ ಸೇವೆಯನ್ನು ಮಾಡುತ್ತಿದ್ದೀರಿ. ಒಳ್ಳೆಯ ಪ್ಲಾನ್ಸನ್ನು ತಯಾರು ಮಾಡುತ್ತಿದ್ದೀರಿ. ಯಾವ ಸೇವೆಯಾದರೆ ಆಗುತ್ತಿದೆಯೋ ಅದು ಚೆನ್ನಾಗಿ ನಡೆಯುತ್ತಿದೆ. ಫಲಿತಾಂಶವೂ ಸಹ ಬರುತ್ತಿದೆ ಮತ್ತು ಧೈರ್ಯವಿದೆ. ಆದ್ದರಿಂದಲೇ ಬಾಪ್‌ದಾದಾ ಸೇವೆಯ ಸಮಾಚಾರವನ್ನು ಕೇಳುತ್ತಾ, ಖುಷಿಯಾಗುತ್ತಿದ್ದಾರೆ ಮತ್ತು ಯಾವ ಹಾಡನ್ನಾಡುತ್ತಿದ್ದಾರೆ? ಬಾಪ್‌ದಾದಾ ಯಾವ ಹಾಡನ್ನು ಹಾಡುತ್ತಿರುತ್ತಾರೆ? ವಾಹ್ ಮಕ್ಕಳೇ ವಾಹ್! ಮತ್ತು ಈ ಸಮಯದಲ್ಲಿ ಪ್ರೋಗ್ರಾಮಂತೂ ನಡೆಯಲೇಬೇಕು. ಪ್ರೋಗ್ರಾಮ್ಸ್ ಅನ್ನು ನಿಲ್ಲಿಸಬಾರದು. ಸಮಯದ ಪರಿಸ್ಥಿತಿಗಳು ಪ್ರೋಗ್ರಾಮನ್ನು ನಿಲ್ಲಿಸಿದರೆ ನಿಲ್ಲಿಸಲಿ, ಆದರೆ ನೀವು ಪ್ರೋಗ್ರಾಮನ್ನು ನಿಲ್ಲಿಸಬಾರದು. ಒಂದು ವೇಳೆ ನೀವೇನಾದರೂ ಪ್ರೋಗ್ರಾಮ್ಸ್ ಇಟ್ಟಾಗ ಸಮಸ್ಯೆಗಳು ಬಂದರೆ, ಬರುವವರು, ಹೋಗುವವರು, ಅವರೇ ಅರ್ಥ ಮಾಡಿಕೊಳ್ಳುತ್ತಾರೆ. ನೀವೇಕೆ ಮಾಡಬಾರದು. ನೀವು ದಾತನ ಮಕ್ಕಳು ಆದ್ದರಿಂದ ಕೊಡುವುದು ಮತ್ತು ಪ್ರೋಗ್ರಾಮ್ ಮಾಡುವುದನ್ನು ನಿಲ್ಲಿಸಬಾರದು. ಬನ್ನಿರಿ, ಭಲೇ ಬನ್ನಿರಿ, ಖುಷಿಯಿಂದ ಬನ್ನಿರಿ, ಸ್ವಾಗತ ಮಾಡುತ್ತೇವೆ. ಎನ್ನಬೇಕು. ಪರಿಸ್ಥಿತಿಗಳು ಬಂದಾಗ ಪರಿಸ್ಥಿತಿಗಳೇ ಅವರನ್ನು ನಿಲ್ಲಿಸಿ ಬಿಡುತ್ತವೆ. ಆದರೆ ನೀವು ನಿಲ್ಲಿಸಬಾರದು. ಆಗ ನೋಡಿರಿ. ಅಮೇರಿಕಾದ ಪೀಸ್ ವಿಲೇಜ್ ನಲ್ಲಿ ಕಾರ್ಯಕ್ರಮಗಳು ನಡೆಯುತ್ತಿವೆಎಲ್ಲವೇ, ಏರುಪೇರು ಆದಾಗಲೂ ಅಮೆರಿಕದಲ್ಲಿಯೂ ಪ್ರೋಗ್ರಾಮ್ಸ್ ನಡೆಯುತ್ತಿವೆ. ಇನ್ನೂ ಚೆನ್ನಾಗಿ ನಡೆದಿದೆ. ನಿಲ್ಲಿಸಿದರೂ ನಿಲ್ಲಲಿಲ್ಲ, ಈಗಿನವರೆಗೂ ಅರ್ಥಾತ್ ಈ ನಾಲ್ಕನೇ ತಾರೀಖಿನವರೆಗೂ ಯಾವ ಪ್ರೋಗ್ರಾಮ್ಸ್ ಅನ್ನಾದರೆ ತಯಾರು ಮಾಡಿದ್ದೀರೋ ಅವುಗಳನ್ನು ಯಾರಾದರೂ ನಿಲ್ಲಿಸಿದ್ದಾರೆಯೇ? ಬಾಂಬ್ಸ್ ಸಹ ಹಾಕುತ್ತಿದ್ದಾರೆ, ಹಾಕಲು ಬಿಡಿ ಯುದ್ಧವಂತೂ ಆಗುತ್ತದೆ ಅಲ್ಲವೇ. ಕೇಳುತ್ತಾ ಇರಿ, ಕೇಳುವುದರಿಂದ ಬ್ರಾಹ್ಮಣರಾದ ನಿಮ್ಮ ವಿಶೇಷ ಸಂಸ್ಕಾರ ದಯಾ ಹೃದಯವು ಪ್ರತ್ಯಕ್ಷವಾಗುತ್ತದೆ ಮತ್ತು ಪ್ರತ್ಯಕ್ಷವಾಗುವುದೇ ಅವಶ್ಯಕವಾಗಿದೆ. ಈ ಸಮಯದಲ್ಲಿ ಪ್ರತಿಯೊಂದು ಆತ್ಮನ ಪ್ರತಿ ದಯಾಹೃದಯಿ, ದಾತರಾಗಬೇಕು ಯಾವುದೋ ಒಂದು ಕೊಡಲೇಬೇಕು. ಮನಸಾ ಸೇವೆಯಿಂದಲಾದರೂ ಶುಭ ಭಾವನೆಯಿಂದಾದರೂ, ಶ್ರೇಷ್ಠ ಶಕ್ತಿಯನ್ನು ಕೊಡುವ ವೃತ್ತಿಯಿಂದಾದರೂ, ಆಧ್ಯಾತ್ಮಿಕ ಶಕ್ತಿಯನ್ನು ತುಂಬಿರುವ ಮಾತಿನಿಂದಾದರೂ, ನಿಮ್ಮ ಸಂಬಂಧ ಸಂಪರ್ಕಗಳಿಂದಾದರೂ ಯಾವುದೋ ಒಂದು ಕೊಡಲೇಬೇಕು. ಆದರೆ ಯಾವ ಆತ್ಮವೂ ವಂಚಿತವಾಗಬಾರದು. ದಾತರಾಗಿ, ದಯಾ ಹೃದಯಗಳಾಗಿರಿ, ಎಲ್ಲರೂ ಚೀರಾಡುತ್ತಿದ್ದಾರೆ. ತಂದೆಯ ಮುಂದೆ ಯಾರ ಭಾಷೆಯಲ್ಲಿ ಅವರು ಶಾಂತಿಯನ್ನು ಕೊಡಿ, ಸ್ನೇಹವನ್ನು ಕೊಡಿ ಎಂದು ಚೀರುತ್ತಿದ್ದಾರೆ. ಮನಸ್ಸಿನ ಪ್ರೀತಿಯನ್ನು ಕೊಡಿ, ಸುಖದ ಕಿರಣಗಳನ್ನು ಕೊಡಿ ಎಂದು. ಆದರೆ ಅವರಿಗೆ ತಂದೆ ಹೇಗೆ ಕೊಡುತ್ತಾರೆ? ಮಕ್ಕಳಾದ ನಿಮ್ಮಿಂದಲೇ ಕೊಡುತ್ತಾರೆ ತಾನೆ! ತಂದೆಗೆ ನೀವೆಲ್ಲರೂ ಬಲ ಭುಜಗಳು. ಯಾವುದಾದರೂ ಕೊಡಬೇಕೆಂದರೆ ಕೈಗಳಿಂದಲೇ ಕೊಡುತ್ತಾರಲ್ಲವೇ ಆದ್ದರಿಂದ ನೀವೆಲ್ಲರೂ ಸಹ ತಂದೆಗೆ ಬಲ ಭುಜಗಳೇ ತಾನೆ! ಪಾಂಡವರು ಬಲಭುಜಗಳೆನಾ? ಎಷ್ಟು ಜನ ತಂದೆಗೆ ಬಲಬಜಗಳಾಗಿ ಇದ್ದೀರಿ. ಬಲ ಭುಜಗಳಾದ ನಿಮ್ಮ ಸ್ಮೃತಿ ಚಿನ್ಹೆಯೂ ಇದೆ. ನಿಮ್ಮ ಸ್ಮೃತಿ ಚಿನ್ಹೆ ಏನು ಎಂದು ನಿಮಗೆ ತಿಳಿದಿದೆಯೇ? ವಿರಾಟ ರೂಪದ ಚಿತ್ರವನ್ನು ನೋಡಿದ್ದೀರಾ?  ಅದರಲ್ಲಿ ಎಷ್ಟು ಕೈಗಳನ್ನು ತೋರಿಸುತ್ತಾರೆ. ಇದು ತಂದೆಗೆ ಇಷ್ಟು ಜನ

ಬಲ ಭುಜಗಳ ಗುರುತಾಗಿದೆ. ಅದರಲ್ಲಿ ಕುಮಾರಿಗಳ ಚಿತ್ರ ಇದೆಯಲ್ಲವೇ. ಆದರಿಂದ ಈಗ ತಂದೆಯು ತನ್ನ ಬಲ ಭುಜಗಳಿಂದ ಆತ್ಮರಿಗೆ ಸುಖ, ಶಾಂತಿಯ ಬಿಂದುವನ್ನು ಕೊಡಿಸುತ್ತಾರಲ್ಲವೇ. ಅಲೆದಾಡುತ್ತಿರುವವರಿಗೆ ಬಿಂದುವನ್ನು ಕೊಡದೇ ಇದ್ದರೆ ಇನ್ನೆಷ್ಟು ಅಲೆದಾಡುತ್ತಾರೆ!

ಈಗ ಎಲ್ಲರೂ ಹದ್ದಿನ ವಿಷಯಗಳಿಂದ ಅತೀತವಾಗಿಬಿಡಿ. ಹದ್ದಿನ ವಿಷಯಗಳಲ್ಲಿ ಹದ್ದಿನ ಸಂಸ್ಕಾರಗಳಲ್ಲಿ ಸಮಯವನ್ನು ಕಳೆದುಕೊಳ್ಳಬೇಡಿರಿ. ಬಾಪ್‌ದಾದಾ ಇಂದೂ ಸಹ ಮಕ್ಕಳೆಲ್ಲರಿಗೂ ಇಲ್ಲಿ ಕುಳಿತಿದ್ದರೂ, ಸೇವಾ ಕೇಂದ್ರದಲ್ಲಿ ಕುಳಿತಿದ್ದರೂ, ವಿದೇಶದಲ್ಲಿ ಇದ್ದರೂ ಸಹ ದಯಾ ಹೃದಯದ ಭಾವನೆಯಿಂದ ಸೂಚನೆಯನ್ನು ಕೊಡುತ್ತಿದ್ದಾರೆ. ಬಾಪ್‌ದಾದಾ ಪ್ರತಿಯೊಂದು ಮಗುವಿನಲ್ಲಿ ಇಲ್ಲಿಯವರೆಗೆ ಹದ್ದಿನ ವಿಷಯಗಳನ್ನು, ಹದ್ದಿನ ಸ್ವಭಾವ ಸಂಸ್ಕಾರಗಳನ್ನು ಅಥವಾ ತುಂಟತನ ಅಥವಾ ಚತುರತೆಯ ಸಂಸ್ಕಾರಗಳು, ಸೋಮಾರಿತನದ ಸಂಸ್ಕಾರವನ್ನು ಬಹಳ ಸಮಯದಿಂದ ನೋಡುತ್ತಿದ್ದಾರೆ. ಕೆಲ ಮಕ್ಕಳು ಎಲ್ಲರೂ ಹಾಗೆಯೇ ನಡೆಯುತ್ತಿದ್ದಾರೆ, ಯಾರು ನೋಡುತ್ತಿದ್ದಾರೆ, ಯಾರಿಗೆ ಗೊತ್ತು, ಎಂದುಕೊಳ್ಳುತ್ತಿದ್ದಾರೆ ಆದರೆ ಇಲ್ಲಿಯವರೆಗೆ ಬಾಪ್‌ದಾದಾ ದಯಾಹೃದಯಿಯಾಗಿದ್ದಾರೆ ಆದ್ದರಿಂದ ನೋಡುತಲೂ, ಕೇಳುತ್ತಲೂ ದಯೆ ತೋರಿಸುತ್ತಿದ್ದಾರೆ ಆದರೆ ಎಲ್ಲಿಯವರೆಗೆ ಹೀಗೆ ದಯಾ ಹೃದಯಿಯಾಗಿ ಇರಬೇಕೆನ್ನುತ್ತಿರಿ, ಎಂದು ಬಾಪ್‌ದಾದಾ ಕೇಳುತ್ತಿದ್ದಾರೆ. ಎಲ್ಲಿಯವರೆಗೆ? ಇನ್ನೂ ಸಮಯ ಬೇಕೇ? ಬಾಬಾನಿಂದ ಸಹಾಯವನ್ನು ಕೇಳುತ್ತಿದ್ದೀರಿ ಆದರೆ ಎಲ್ಲಿಯವರೆಗೆ ಕೇಳುತ್ತಾ ಇರುತ್ತೀರಿ? ಪ್ರಕೃತಿಯೂ ಸಹ ಕೇಳುತ್ತಿದೆ. ನೀವು ಉತ್ತರವನ್ನು ಕೊಡಿ. ಈಗಂತೂ ಕೇವಲ ತಂದೆಯ ರೂಪ ನಡೆಯುತ್ತಿದೆ. ಶಿಕ್ಷಕ ಮತ್ತು ಸದ್ಗುರುವಿನ ರೂಪವೂ ಇದೆ ಆದರೆ ತಂದೆಯ ಪಾತ್ರವೂ ನಡೆಯುತ್ತಿದೆ. ಕ್ಷಮಾ ಸಾಗರನ ಪಾತ್ರವು ನಡೆಯುತ್ತಿದೆ ಆದರೆ ಧರ್ಮರಾಜನ ಪಾತ್ರ ನಡೆದರೆ ಏನು ಮಾಡುತ್ತಾರೆ. ಬಾಪ್‌ದಾದಾ ಇದೆ ಇಚ್ಛೆಯನ್ನಿಡುತ್ತಿದ್ದಾರೆ- ಧರ್ಮರಾಜನ ರೂಪದಲ್ಲಿ ಸಹ ಓಹೋ ಮಕ್ಕಳೇ, ಓಹೋ ಎಂಬ ಧ್ವನಿ ಕಿವಿಯಲ್ಲಿ ಕೇಳಿಸಬೇಕು ಎಂದು. ನಂತರ ತಂದೆಯನ್ನು ನಿಂದಿಸಬಾರದು. ತಂದೆ ನೀವು ಹೇಳಲಿಲ್ಲ, ನಾವು ತಯಾರಾಗುತ್ತಿದ್ದೇವೆ ತಾನೇ ಎಂದು. ಆದರಿಂದ ಈಗ ಹದ್ದಿನ ಚಿಕ್ಕ ಚಿಕ್ಕ ವಿಷಯಗಳಲ್ಲಿ, ಸ್ವಭಾವ ಸಂಸ್ಕಾರಗಳಲ್ಲಿ ಸಮಯವನ್ನು ಕಳೆದುಕೊಳ್ಳಬೇಡಿರಿ. ನಡೆಯುತ್ತಿದ್ದೇವೆ, ನಡೆಯುತ್ತಿದ್ದೇವೆ ಎಂದಲ್ಲ. ಎರಡು, ಮೂರು, ನೂರು ಪಟ್ಟು ಜಮಾ ಆಗಿಬಿಡುತ್ತಾ ಇದೆ. ನಡೆದುಹೋಗುವುದಿಲ್ಲ ಆದ್ದರಿಂದ ಮನಸ್ಸಿನಲ್ಲಿ ಈ ದೃಢಸಂಕಲ್ಪದ ದೀಪವನ್ನು ಹಚ್ಚಿರಿ. ಹದ್ದಿನಿಂದ ಬೇಹದ್ ದೃಷ್ಟಿ, ವೃತ್ತಿ, ಕೃತಿಯನ್ನು ತಯಾರು ಮಾಡಿಕೊಳ್ಳಬೇಕು ಎಂದು ಹೇಳುತ್ತಿದ್ದಾರೆ. ಬಾಪ್‌ದಾದಾ ಇಂದು ತಯಾರಾಗಲೇಬೇಕು ಎಂದು ಹೇಳುತ್ತಿದ್ದಾರೆ. ನಂತರ ಏನು ಹೇಳುತ್ತಾರೆ ಟೂ ಲೇಟ್(ಬಹಳ ಆಲಸ್ಯವಾಗಿಬಿಟ್ಟಿದೆ) ಎನ್ನುತ್ತಾರೆ. ಸಮಯವನ್ನು ನೋಡಿರಿ, ಸೇವೆಯನ್ನು ನೋಡಿರಿ, ಸಮಯ ಮುಂದಕ್ಕೆ ಓಡುತ್ತಿರುತ್ತದೆ, ಸೇವೆಯು ಸಹ ಬೆಳೆಯುತ್ತದೆ ಆದರೆ ಸ್ವಯಂ ಹದ್ದಿನಲ್ಲಿ ಇದ್ದೇನೆಯೇ ಅಥವಾ ಬೇಹದ್ದಿನಲ್ಲಿ ಇದ್ದೀರಾ? ಹದ್ದಿನ ವಿಷಯಗಳ ಹಿಂದೆ ನೀವು ಓಡಬೇಡಿರಿ. ಆಗ ಬೇಹದ್ ಸ್ವಮಾನದ ಸ್ಥಿತಿ ನಿಮ್ಮ ಹಿಂದೆ ಓಡುತ್ತದೆ. ಬಾಪ್‌ದಾದಾ ಈ ವರ್ಷ ಈ ಸಮಯದವರೆಗೂ ಮಾಡಿರುವುದರಲ್ಲಿ ಸಂತುಷ್ಟವಾಗುತ್ತಿದ್ದಾರೆ.

ಈಗ ಸೇವೆಯಲ್ಲಿ ಅನುಭೂತಿ ಮಾಡಿಸಬೇಕು. ದೀಪದ ಮೇಲೆ ದೀಪದ ಹುಳುಗಳನ್ನು ಬಲಿ ಮಾಡಬೇಕು. ಸಹಯೋಗಿಯಾಗಿ ಮಾಡಿದರೂ, ಹೇಗೆ ತಯಾರು ಮಾಡಿದರೂ ಈಗ ಅನುಭೂತಿಯ ಖಜಾನೆಯನ್ನು ತೆಗೆಯಿರಿ.

ಚೆನ್ನಾಗಿದೆ ಎನ್ನುವಷ್ಟರವರೆಗೂ ಚಕ್ರವು ತಿರುಗುವ ದೀಪದ ಹುಳುಗಳಂತೆ ಮಾಡಬೇಡಿರಿ. ಅನುಭೂತಿಯ ಕೋರ್ಸ್ ನಿಂದ ಪಕ್ಕಾ ದೀಪದ ಹುಳುಗಳಾಗಿ ಬಿಡುತ್ತೀರಿ. ಬಹಳ ಚೆನ್ನಾಗಿದೆ, ಸ್ವರ್ಗದಂತೆ ಇದೆ ಇಲ್ಲಿಯವರೆಗೆ ಅನುಭವ ಆಗುತ್ತಿದೆ. ಇದೇ ಯಥಾರ್ಥ ಜ್ಞಾನ.... ಇಲ್ಲಿಯವರೆಗೆ ಸೇವೆಯ ಫಲಿತಾಂಶವು ಚೆನ್ನಾಗಿದೆ. ಈಗ ಅನುಭೂತಿಯ ಸ್ವರೂಪವಾಗಿ ಅನುಭವ ಮಾಡಿಸಿರಿ. ಅನುಭವ ಮಾಡಿಕೊಳ್ಳುವವರು ತಂದೆಯೊಂದಿಗೆ ಡೈರೆಕ್ಟ್ ಸಂಬಂಧವನ್ನು ಇಟ್ಟುಕೊಳ್ಳುವವರು. ಈ ವಿಧವಾದ ಅನುಭವೀ ದೀಪದ ಹುಳುಗಳನ್ನು ತಯಾರು ಮಾಡಿರಿ. ಸಹಯೋಗಿಗಳನ್ನಾಗಿ ಮಾಡಿದ್ದೀರಿ. ಇದಕ್ಕಾಗಿ ಶುಭಾಶಯಗಳು. ಇನ್ನೂ ತಯಾರು ಮಾಡಿರಿ. ಇದೇ ಸ್ಥಾನ, ಈ ಸ್ಥಾನದಿಂದಲೇ ಪ್ರಾಪ್ತಿ ಲಭಿಸುತ್ತದೆ ಎಂದು ಇಲ್ಲಿಯವರೆಗೆ ಅನುಭವ ಮಾಡಿಕೊಳ್ಳುತ್ತಿದ್ದಾರೆ ಆದರೆ ತಂದೆಯೊಂದಿಗೆ ಸಂಬಂಧವನ್ನು ಜೋಡಿಸಲ್ಪಡಬೇಕು. ಅವರು ದೀಪದ ಹಿಂದೆಯೇ ತಿರುಗುತ್ತಾ ಇರಬೇಕು. ಆದ್ದರಿಂದ ಈ ವರ್ಷ ವಿಶೇಷವಾಗಿ ಬಾಪ್‌ದಾದಾರವರ ಅನುಭೂತಿ ಮಾಡಿಸುವ ಕೋರ್ಸ್ ಸೇವೆಯಲ್ಲಿ ನೋಡಬೇಕೆಂದುಕೊಳ್ಳುತ್ತಿದ್ದಾರೆ. ಇದರಿಂದಲೇ ಸಾಕ್ಷಾತ್ಕಾರಗಳು ಸಹ ಆಗುತ್ತವೆ ಮತ್ತು ಸಾಕ್ಷಾತ್ ತಂದೆಯು ಪ್ರತ್ಯಕ್ಷವಾಗುತ್ತಾರೆ ಆದ್ದರಿಂದ ಏನು ಮಾಡಬೇಕೋ ತಿಳಿಯಿತೇ? ಪ್ಲಾನ್ ಲಭಿಸಿದೆಯಲ್ಲವೇ, ಈ ವರ್ಷ ಎಷ್ಟು ಜನರನ್ನು ದೀಪವಾದ ತಂದೆಗೆ ಬಲಿ ಮಾಡುತ್ತೀರಿ ಎಂಬುವ ಫಲಿತಾಂಶವನ್ನು ನೋಡುತ್ತಿದ್ದೇನೆ. ಸ್ವಾಹಾ ಆಗಿಬಿಟ್ಟರು ಬಾಬಾ, ಬಾಬಾ ಎಂಬ ಚಕ್ರವನ್ನಂತೂ ತಿರುಗುತ್ತಾರೆ. ಒಳ್ಳೆಯದು, ಕುಮಾರಿಯರು ಚೆನ್ನಾಗಿದ್ದೀರಲ್ಲವೇ, ಒಳ್ಳೆಯದು.

ನಾಲ್ಕು ಕಡೆ ಇರುವ ಮಕ್ಕಳ ಉತ್ತರಗಳು ಸಹ ಬಾಪ್‌ದಾದಾರವರಿಗೆ ಲಭಿಸುತ್ತಿವೆ. ಮಕ್ಕಳು ಬರೆಯುವುದನ್ನು ಪ್ರಾರಂಭಿಸುತ್ತಿದ್ದಾರೆ. ಅದಕ್ಕಿಂತಲೂ ಮೊದಲೇ ಅದು ತಂದೆಯ ಹತ್ತಿರ ತಲುಪಿಬಿಡುತ್ತದೆ. ಮನಸ್ಸಿನ ಧ್ವನಿಯಲ್ಲವೇ! ಇದಂತೂ ಕೈಗಳಿಂದ ಬರೆಯುತ್ತಿದ್ದೀರಿ. ಆದರೆ ಮೊದಲು ಮನಸ್ಸಿನ ಧ್ವನಿ ಮನೋಭಿರಾಮನ ಹತ್ತಿರ ತಲುಪುತ್ತದೆ ಇದು ಸಹ ಒಳ್ಳೆಯದೇ, ಇದರಿಂದಲೂ ಸಹ ಬಾಪ್‌ದಾದಾರವರು ಸ್ಮೃತಿ ಬರುತ್ತಿದ್ದಾರಲ್ಲವೇ! ಸಮಾಚಾರ ಬರೆಯುವ ಸಮಯದಲ್ಲಿ ಎಷ್ಟು ಆನಂದವಾಗಿರುತ್ತದೆ; ಆದ್ದರಿಂದ ಯಾರಾದರೆ ಬಾಪ್‌ದಾದಾರವರಿಗೆ ಉತ್ತರಗಳ ಮೂಲಕ, ಇಮೇಲ್ ನ ಮೂಲಕ, ಸಾಧನಗಳ ಮೂಲಕ ಪ್ರೀತಿಯ ಸ್ಮೃತಿಯನ್ನು ಮತ್ತು ಸಮಾಚಾರವನ್ನು ಕಳಿಸಿದ್ದಾರೆಯೋ ಅವರೆಲ್ಲರಿಗೂ ಒಬ್ಬೊಬ್ಬರಿಗೆ ಹೆಸರು ಹೆಸರಿನಿಂದ ಪ್ರಿಯ ಸ್ಮೃತಿಗಳು ಮತ್ತು ಶುಭಾಶಯಗಳು. ನೀವೆಲ್ಲರಂತೂ ಸಮ್ಮುಖದಲ್ಲಿಯೇ ಕೊಡುತ್ತಿದ್ದೀರಲ್ಲವೇ. ಅವರಿಗಂತು ಕಳುಹಿಸಬೇಕಾಗಿ ಬರುತ್ತದೆ ಆದ್ದರಿಂದ ಎಲ್ಲರಿಗೂ ನಾಲ್ಕು ಕಡೆ ಇರುವ ಮಕ್ಕಳಿಗೆ ದೀಪಾವಳಿ ಹಬ್ಬದ ಶುಭಾಶಯಗಳು ಸಹ ಕೊಡುತ್ತಿದ್ದಾರೆ. ಯಾವ ದೀಪಾವಳಿಯನ್ನು ಆಚರಿಸಿಕೊಳ್ಳಬೇಕು ಎಂದು ತಿಳಿಸಿದ್ದೇನಲ್ಲವೇ. ಒಳ್ಳೆಯದು.

**ನಾಲ್ಕು ಕಡೆ ಇರುವ ಬಾಪ್‌ದಾದಾರವರ ಹೃದಯ ಸಿಂಹಾಸನಾಧಿಕಾರಿ ಶ್ರೇಷ್ಠಾತ್ಮರಿಗೆ, ಸದಾ ಹದ್ದಿನ ಸ್ವಭಾವ ಸಂಸ್ಕಾರಗಳನ್ನು ಪರಿವರ್ತನೆ ಮಾಡಿಕೊಳ್ಳುವ ಬೇಹದ್ ವಿಶ್ವ ಪರಿವರ್ತಕರಿಗೆ, ಸದಾ ಒಂದು ಕ್ಷಣ, ಒಂದು ಸಂಕಲ್ಪವೂ ಸಹ ವ್ಯರ್ಥವಾಗಿ ಕಳೆದುಕೊಳ್ಳದೇ ಇರುವವರಿಗೆ, ಜಮಾ ಮಾಡಿಕೊಳ್ಳುವ ತೀವ್ರ ಪುರುಷಾರ್ಥಿ ಮಕ್ಕಳಿಗೆ, ಸದಾ ದಾಯಾಹೃದಯಿಗಳಾಗಿ, ದಾತರಾಗಿ ಪ್ರತಿಯೊಬ್ಬ ಆತ್ಮನಿಗೆ ಬ್ರಾಹ್ಮಣತ್ಮನಾದರೂ ದಾಹದಿಂದ ಇರುವ ಆತ್ಮನಿಗೆ**

**ಯಾವುದೋ ಒಂದು ಬಿಂದುವನ್ನು ಕೊಡುವವರಿಗೆ, ಶಕ್ತಿಯನ್ನು ಕೊಡುವವರಿಗೆ, ಇಂತಹ ವಿಶಾಲ ಹೃದಯಿಗಳಾದ ಮಕ್ಕಳಿಗೆ ಬಾಪ್‍ದಾದಾರವರ ಪ್ರಿಯಸ್ಮೃತಿಗಳು ಮತ್ತು ನಮಸ್ತೆ.**

ರಿವೈಸ್ ಕೋರ್ಸ್ 04-11-2001.

***ಸತ್ಯವಾದಿಯಾಗಿರಿ ಮತ್ತು ಸಮಯವನ್ನನುಸರಿಸಿ ಬೇಹದ್ ವೃತ್ತಿ ಮತ್ತು ಕೃತಿಯನ್ನು ತಯಾರು ಮಾಡಿಕೊಳ್ಳವ ದೃಢ ಸಂಕಲ್ಪವೆಂಬ ದೀಪವನ್ನು ಬೆಳಗಿಸಿರಿ.***

ವರದಾನವನ್ನು ಪ್ರತಿಯೊಂದು ದಿನ ಅಮೃತ ವೇಳೆ ಮತ್ತು ಕರ್ಮಯೋಗಿ ಸ್ಥಿತಿಯಲ್ಲಿ ಮಾತು ಮಾತಿಗೆ ಮನಸ್ಸಿನಲ್ಲಿ ಸ್ಮೃತಿ ಮಾಡಿರಿ.... ಸಂಪಾದಿಸಿಕೊಳ್ಳುವ ಸಮಯದಲ್ಲಿ ಕಳೆದುಕೊಂಡರೆ ಇನ್ನು ಯಾವಾಗ ಸಂಪಾದಿಸಿಕೊಳ್ಳುತ್ತೀರಿ. ಇನ್ನು ಯಾವಾಗಲೂ ಸಂಪಾದಿಸಿಕೊಳ್ಳಲು ಸಮಯವು ಲಭಿಸುವುದಿಲ್ಲ.... ಜ್ಞಾನದ ಖಜಾನೆ ಪ್ರತ್ಯಕ್ಷ ಜೀವನದಲ್ಲಿ ಬರಬೇಕು. ಜ್ಞಾನ ಅರ್ಥಾತ್ ಸಂಕಲ್ಪ, ಮಾತು ಮತ್ತು ಕರ್ಮದಲ್ಲಿ ಪ್ರಕಾಶ ಮತ್ತು ಶಕ್ತಿ ಇರಬೇಕು. ಆಗಲೇ ಜ್ಞಾನ ಸ್ವರೂಪರು ಎಂದು ಕರೆಯುತ್ತಾರೆ....ಈ ಸಮಯದಲ್ಲಿ ಎಲ್ಲರಿಗೂ ಬೇಕಾಗಿರುವುದು ಶಾಂತಿ ಮತ್ತು ಸ್ನೇಹ. ಶಾಂತಿಯ ಬಾಯಾರಿಕೆಯಿಂದ ಸ್ನೇಹದ ಬಾಯಾರಿಕೆಯಿಂದ ಇದ್ದಾರೆ....ಈಗ ಎಲ್ಲರ ಹದ್ದಿನ ವಿಷಯಗಳಿಂದ ಅತೀತವಾಗಿ ಬಿಡಿ. ಹದ್ದಿನ ವಿಷಯಗಳಲ್ಲಿ, ಹದ್ದಿನ ಸಂಸ್ಕಾರಗಳಲ್ಲಿ ಸಮಯವನ್ನು ಕಳೆಯಬೇಡಿರಿ ಎಂದು ತಿಳಿಸುತ್ತಾ ಬಾಪ್‍ದಾದಾ ಧೈರ್ಯವಂತರಾದ ಮಕ್ಕಳನ್ನು ನೋಡುತ್ತಾ ಮಾತನಾಡುತ್ತಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಮರ್ಥ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗಸ್ಥಿತಿ.**

ನಾನು ಆತ್ಮ ಆನಂದ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ವರದಾನಗಳನ್ನು ಪ್ರತಿಯೊಂದು ದಿನ ಅಮೃತವೇಳೆ ಮತ್ತು ಕರ್ಮಯೋಗೀ ಸ್ಥಿತಿಯಲ್ಲಿ ಮಾತು ಮಾತಿಗೆ ಮನಸ್ಸಿನಿಂದ ಸ್ಮೃತಿ ಮಾಡುತ್ತಿದ್ದೇನೆ.

2. ನನ್ನ ಮನಸ್ಸಿನಲ್ಲಿ ಮತ್ತು ನಯನಗಳಲ್ಲಿ ನಿರಂತರ ತಂದೆಯ ಬಿಂದುವನ್ನು ಸಮಾವೇಶಗೊಳಿಸಿಕೊಂಡು ಬಾಪ್‍ದಾದಾರವರನ್ನು(ಮಾಲೀಕನನ್ನು) ರಾಜಿ ಮಾಡಿಕೊಂಡಿದ್ದೇನೆ.

3. ನಾನು ಪ್ರತಿಯೊಂದು ಕರ್ಮದಲ್ಲಿ ಸತ್ಯವಾದಿಯಾಗಿ ಇದ್ದೇನೆ.

4. ನಾನು ಸತ್ಯವಾದ ಮನಸ್ಸಿನಿಂದ, ಸಂಕಲ್ಪದಿಂದ, ಮಾತು ಮತ್ತು ಕರ್ಮದಲ್ಲಿ, ಸಂಬಂಧ ಸಂಪರ್ಕದಲ್ಲಿ, ರಾಜಯುಕ್ತವಾಗಿ ಅರ್ಥಾತ್ ರಹಸ್ಯವನ್ನು ಅರ್ಥ ಮಾಡಿಕೊಂಡು ನಡೆಯುತ್ತಿದ್ದೇನೆ. ಎಲ್ಲರ ಮತ್ತು ಸ್ವಯಂನ ಸ್ವಭಾವ ಸಂಸ್ಕಾರಗಳನ್ನು ತಿಳಿದು ಸಂಕಲ್ಪದಲ್ಲಿಯೂ ಮತ್ತು ವೃತ್ತಿಯಿಂದ, ಸ್ಮೃತಿಯಿಂದ ದೃಷ್ಟಿಯಿಂದಲೂ ಸಹ ಯಾರ ಮೇಲೆಯೂ ಕ್ರೋಧದಲ್ಲಿ ಬರದೇ ರಾಜಯುಕ್ತವಾಗಿ ಇದ್ದೇನೆ.

5. ನಾನು ನನ್ನ ಮನಸ್ಸು, ಬುದ್ಧಿ, ಸ್ವಪ್ನವನ್ನೂ ಸಹ ಸದಾ ಶುಭವಾಗಿ ಮತ್ತು ಶುದ್ಧವಾಗಿ ಇಟ್ಟುಕೊಂಡಿದ್ದೇನೆ.

6. ನನ್ನ ಮನಸ್ಸಿನ ಕ್ಯಾಚಿಂಗ್ ಪವರ್ (ಗ್ರಹಣ ಶಕ್ತಿಯ) ಸ್ವಿಚ್ ಅನ್ನು ಆನ್ ಮಾಡಿ ಬಾಪ್‌ದಾದಾರವರು ಕೊಟ್ಟಿರುವ ಶಕ್ತಿಗಳನ್ನು ಸಮಯಕ್ಕೆ ಉಪಯೋಗಿಸುತ್ತಿದ್ದೇನೆ.

7. ನಾನು ಸಂಸ್ಕಾರಗಳ ಪರಿವರ್ತನೆಯಿಂದ ವಿಶ್ವದ ಪರಿವರ್ತನೆಯನ್ನು ಮಾಡುವ ವಿಶ್ವ ಪರಿವರ್ತಕನು.

8. ನಾನು ಅಂತರ್ಮುಖಿಯಾಗಿ ಅತೀಂದ್ರಿಯ ಸುಖ, ಸೇವೆಯಲ್ಲಿ ಮಹಾದಾನಿಯಾಗಿ ಆತ್ಮರಿಗೆ ಮಹಾದಾನ ಮಾಡುತ್ತಾ ಪರಸ್ಪರ ಆತ್ಮಿಕ ಸಂಭಾಷಣೆ, ನೃತ್ಯ ಅಥವಾ ಸಂಬಂಧ ಸಂಪರ್ಕಗಳಿಂದ ಪರಸ್ಪರ ವಿಶೇಷತೆಗಳನ್ನು ನೋಡುತ್ತಾ ವಿಶೇಷತೆಗಳ ಸುವಾಸನೆಯನ್ನು ಸ್ವೀಕರಿಸಿ ಸಂಗಮಯುಗವನ್ನು ಆಚರಿಸಿಕೊಳ್ಳುತ್ತಿದ್ದೇನೆ ಮತ್ತು ಸಂಪಾದಿಸಿಕೊಳ್ಳುತ್ತಿದ್ದೇನೆ.

9. ನಾನು ಸಂಗಮಯುಗದಲ್ಲಿ ಸಂಕಲ್ಪವನ್ನು, ಸಮಯವನ್ನು ಸಫಲ ಮಾಡಿಕೊಳ್ಳುತ್ತಿದ್ದೇನೆ.

10. ನನ್ನ ಸಂಕಲ್ಪ, ಮಾತು ಮತ್ತು ಕರ್ಮದಲ್ಲಿ ಜ್ಞಾನದ ಪ್ರಕಾಶ ಮತ್ತು ಶಕ್ತಿ ಇರುವ ಜ್ಞಾನ ಸ್ವರೂಪ.

11. ನಾನು ಜ್ಞಾನ ಸ್ವರೂಪವಾಗಿ ತಂದೆಗೆ ಬಲ ಭುಜವಾಗಿರುವ ಕುಮಾರಿಯಾಗಿದ್ದೇನೆ.

12. ನಾನು ಪ್ರೋಗ್ರಾಮ್ಸ್ ಇಟ್ಟಾಗ ಸಮಸ್ಯೆಗಳು ಅಥವಾ ಪರಿಸ್ಥಿತಿಗಳು ಬಂದರೆ ಬರುವವರು ಹೋಗುವವರು ಅವರೇ ಅರ್ಥ ಮಾಡಿಕೊಳ್ಳುತ್ತಾರೆ ಆದರೆ ನಾನು ಮಾತ್ರ ದಾತ ಸ್ವರೂಪವಾಗಿ ಕೊಡುವುದು, ಪ್ರೋಗ್ರಾಮ್ ಮಾಡುವುದನ್ನು ನಿಲ್ಲಿಸುವುದಿಲ್ಲ.

13. ನಾನು ಮನಸಾ ಸೇವೆಯಿಂದ, ಶುಭ ಭಾವನೆಯಿಂದ, ಶ್ರೇಷ್ಠ ಶಕ್ತಿಯನ್ನು ಕೊಡುವ ವೃತ್ತಿಯಿಂದ, ಆಧ್ಯಾತ್ಮಿಕ ಶಕ್ತಿಯಿಂದ ತುಂಬಿರುವ ಮಾತಿನಿಂದ, ನನ್ನ ಸಂಬಂಧ ಸಂಪರ್ಕಗಳಿಂದ ಪ್ರತಿಯೊಬ್ಬ ಆತ್ಮನ ಪ್ರತಿ ದಯಾ ಹೃದಯಿಯಾಗಿ, ದಾತನಾಗಿ ಯಾವುದೋ ಒಂದನ್ನು ಕೊಡುತ್ತಿದ್ದೇನೆ.

14. ನಾನು ತಂದೆಗೆ ಬಲ ಭುಜವಾಗಿ ಆತ್ಮರಿಗೆ ಸುಖ, ಶಾಂತಿಯ ಬಿಂದುವನ್ನು ಕೊಡುತ್ತಿದ್ದೇನೆ.

15. ನಾನು ಹದ್ದಿನ ವಿಷಯಗಳು, ಸ್ವಭಾವ ಸಂಸ್ಕಾರಗಳು ಅಥವಾ ತುಂಟರಿತನ, ಚತುರತೆ, ಸೋಮಾರಿತನದ ಸಂಸ್ಕಾರಗಳಿಂದ ಅತೀತವಾಗಿ ಸಮಯವನ್ನು ಸಫಲ ಮಾಡುವ ತೀವ್ರ ಪುರುಷಾರ್ಥಿಯಾಗಿದ್ದೇನೆ.

16. ನಾನು ಮನಸ್ಸಿನಲ್ಲಿ ಬೇಹದ್ ದೃಷ್ಟಿ, ವೃತ್ತಿ, ಕೃತಿಯನ್ನು ತಯಾರು ಮಾಡಿಕೊಳ್ಳುವ ದೃಢಸಂಕಲ್ಪವೆಂಬ ದೀಪವನ್ನು ಬೆಳಗಿಸಿದ್ದೇನೆ.

17. ನಾನು ಸೇವೆಯಲ್ಲಿ ಅನುಭೂತಿ ಸ್ವರೂಪವಾಗಿ ಅನುಭವಿ ದೀಪದ ಹುಳುಗಳನ್ನು ತಯಾರು ಮಾಡಿ (ಆತ್ಮರ ಸಂಬಂಧವನ್ನು ಡೈರೆಕ್ಟ್ ತಂದೆಯೊಂದಿಗೆ ಜೋಡಿಸಿ) ದೀಪವಾದ ತಂದೆಗೆ ಬಲಿ ಮಾಡಿದ್ದೇನೆ.